ಪಡಿಸಿಕೊಳ್ಳುತ್ತಿದ್ದಾರೆ. ಇದರಲ್ಲಿ ೧೮, ೨೦, ೫೦ ವಯಸ್ಸಿನವರೂ ಸಹ ಇದ್ದಾರೆ. ಇವರ ಸಾಂಸಾರಿಕ ಜೀವನ ಸುಗಮವಾಗುವುದಕ್ಕೆ ಶಾಶ್ವತ ಪುನರ್‌ವಸತಿಯನ್ನು ಏಕೆ ಮಾಡಬಾರದು ? ಮುದುವೆಯಾದವರಿಗೆ ಸ್ವಂತ ಉದ್ಯಮ ಮಾಡಿ ಸ್ವಾವಲಂಬಿಗಳಾಗುವುದಕ್ಕೆ ಧನ ಸಹಾಯ ಮಾಡುತ್ತಿದ್ದೇವೆ. ಇದರಲ್ಲಿ ಯಾರು ವಯೋವೃದ್ಧರಿದ್ದಾರೆ ಅವರಿಗೆ ವೃದ್ಧಾಪ್ಯವೇತನ ಕೊಡಬೇಕಾಗುತ್ತದೆ. ಸ್ವಂತ ಉದ್ಯೋಗ ಮಾಡುವುದಕ್ಕೆ ಪ್ರೋತ್ಸಾಹ ಕೊಡಬೇಕಾಗುತ್ತದೆ ನಾವು ನೀವು ಎಲ್ಲಾ ಸೇರಿ ಕೆಲಸ ಮಾಡಿದರೆ, ಇವರನ್ನು ಮೇಲಕ್ಕೆ ತರಬಹುದು. ದೇವದಾಸಿ ಪದ್ಧತಿಗೆ ಚಾರಿತ್ರಿಕ ಹಿನ್ನೆಲೆ ಇದೆ. ದೇವರ ಹೆಸರಿನಲ್ಲಿ ಬಹಳ ವರ್ಷಗಳಿಂದ ಇದನ್ನು ನಡೆಸಿಕೊಂಡು ಬಂದಿದ್ದಾರೆ. ಇದು ಸಮಾಜದ ಪಿಡುಗಾಗಿದೆ. ಈ ಜನರಿಗೆ ವಿದ್ಯೆ ಕಲಿಸಿ, ಅವರು ಹೆಚ್ಚಿನ ತಿಳಿವಳಿಕೆ ಪಡೆಯುವುದರಿಂದ ಇವರನ್ನು ಮೇಲಿತ್ತಬಹುದಾಗಿದೆ. ಈ ಬಗ್ಗೆ ಗೃಹ ಇಲಾಖೆಯ ಅಧಿಕಾರಿಗಳು ಏನು ಪಾತ್ರ ವಹಿಸಿದ್ದಾರೆ, ಆ ಬಗ್ಗೆ ನಾವು ಅಭಿನಂದನೆ ಸಲ್ಲಿಸಬೇಕಾಗಿದೆ. ಸಮಾಜದಲ್ಲಿ ಇತರೆ ಬೇರೆ ಅಂಗ ಸಂಸ್ಥೆಗಳು, ಗಣ್ಯ ವ್ಯಕ್ತಿಗಳು, ರಾಜಕಾರಣಿ ಮುಂಖಂಡರು, ಹೆಚ್ಚಿನ ಪಾತ್ರ ವಹಿಸಿದರೆ ಇವರಿಗೆ ಪುನರ್ ವಸತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ರೀತಿಯಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕಾಲ ಕ್ರಮೇಣ, ಇವರಂ ಹೆಚ್ಚಿನ ಪ್ರಗತಿ ಹೊಂದುವ ದಿಸೆಯಲ್ಲಿ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಬೇಕಾಗಿರತಕ್ಕದ್ದು, ಅವಿಶ್ವಾಸ, ಅಸಹಕಾರ, ಅಮಾನುಷ ವರ್ತನೆ ಅಲ್ಲ. ಪರಸ್ಪರ ಸಹಕಾರ ವಿಶ್ವಾಸ ಅಭಿಮಾನ, ಪ್ರೋತ್ಸಾಹ ತೋರಿಸಿ ಪ್ರಕ್ಷಾತೀತವಾಗಿ ಕೆಲಸ ಮಾಡಿದರೆ ಸರ್ವತೋಮುಖ ಅಭಿವೃದ್ಧಿ ಯಾಗುತ್ತದೆ. ಈ ಬಗ್ಗೆ ಎಲ್ಲರೂ ಪ್ರೋತ್ಸಾಹ ನೀಡಬೇಕೆಂದು ಇಷ್ಟು ಮಾತನ್ನು ಆಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಹೆಸರಿನಲ್ಲಿರುವ ಬೇಡಿಕೆಗಳಿಗೆ ಮಾನ್ಯ ಸಭೆ ತನ್ನ ಒಪ್ಪಿಗೆ ಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಹಿಂದುಳಿದ ವರ್ಗದವರು ಹಾಗೂ ದುರ್ಬಲವರ್ಗದವರ ಬಗ್ಗೆ ಹೆಚ್ಚು ಆಸಕ್ತಿ ಹೊಂ ದಿದ್ದ ಶ್ರೀ ದೇವರಾಜ ಅರಸ್ ಅವರು ತೀರಿಕೊಂಡ ಸಮಯದಲ್ಲಿ ಅವರ ಹೆಸರಿ ನಲ್ಲಿ ಒಂದು ಅಧ್ಯಯನ ಸಂಸ್ಥೆ ಸ್ಥಾಪನೆ ಮಾಡುವ ಬಗ್ಗೆ ಈ ಮನೆಯಲ್ಲಿ ಹೇಳಿಕೆ ಕೊಟ್ಟಿದ್ದು ಇದೆ. ಕೊಟ್ಟ ಮಾತನ್ನು ಈ ಸರ್ಕಾರ ಕೂಡಾ ನಿರ್ವಹಿಸಬೇಕೆಂದು ನಮ್ಮ ಇಚ್ಛೆ. ಈ ಬಗ್ಗೆ ಏನು ಪ್ರಯತ್ನ ಮಾಡಿದ್ದೀರಿ ? ಈ ಬಗ್ಗೆ ಅವರ ಹೆಸರಿನಲ್ಲಿ ಅವಾರ್ಡ್ ಕೊಟ್ಟರೆ ಸಾಲದು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇವರ ಹಿರಿಯ ಮಗಳಾದ ತಾವು ಅವರ ಕನಸನ್ನು ನನಸು ಮಾಡತಕ್ಕ ದೃಷ್ಟಿಯಲ್ಲಿ ಏನು ಪ್ರಯತ್ನ ಮಾಡುತ್ತೀರಿ? ಎರಡನೆಯದಾಗಿ, ಹಿಂದಂಳಿದ ವರ್ಗದವರಿಗೆ ವಾರ್ಷಿಕ ಆದಾಯದ ಮಿತಿಯನ್ನು ಹತ್ತು ಸಾವಿರ ರೂಪಾಯಿಗಳೆಂದು ೧೯೭೭ರಲ್ಲಿ ಮಾಡಲಾಗಿತ್ತು. ಕಡೇ ಪಕ್ಷ ಇದನ್ನು ಇಪ್ಪತ್ತು ಸಾವಿರ ರೂಪಾಯಿಗಳಿಗೆ ನಿಗಧಿ ಪಡಿಸಬೇಕೆಂದಂ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ ನಮ್ಮ ಗಂಡುಗಲಿ, ಹಿಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ಪುತ್ರಿ ಶ್ರೀಮತಿ ಚಂದ್ರಪ್ರಭಾ ಅರಸ್ ಅವರ ಮೇಲೆ ನನಗೆ ನಂಬಿಕೆ ಇದೆ. ಅವರು ಒಳ್ಳೆಯ ದಯಾಳುಗಳು. ಆದರೆ ಅವರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಯಾವುದೇ ವಿದ್ಯಾರ್ಥಿಯ ಶಾಲಾ ನೇಮಕಾತಿ ರಿಜಿಸ್ಟರ್‌ನಲ್ಲಿ ಹಾಗೂ ಟ್ರಾನ್ಸ್‌ಫರ್ ಸರ್ಟಿಫಿಕೇಟಿನಲ್ಲಿ ನಾಯಕ, ಬೇಡ, ವಾಲ್ಮೀಕಿ, ತಳವಾರ, ಪಾಳೇಗಾರ ಎಂಬ ಜಾತಿ ನಮೂದಾಗಿದ್ದರೆ, ಅವರನ್ನು ನಾಯಂಕ ಜನಾಂಗಕ್ಕೆ ಸೇರಿದವರು ಎಂದು ಸರ್ಟಿಫಿಕೇಟ್ ಕೊಡುವ ರೀತಿ ಒಂದು ಸರ್ಕಾರಿ ಆಜ್ಞೆಯನ್ನು ತಕ್ಷಣ ಹೊರಡಿಸಬೇಕು. ಇಂಥವರ ಮೇಲೆ ಯಾವುದಾದರೂ ಸಿ.ಆರ್.ಇ. ಕೇಸುಗಳಿದ್ದರೆ ಅಂಥವುಗಳನ್ನು ತಕ್ಷಣ ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ಆಜ್ಞೆ ಮಾಡಬೇಕು. ಈ ಬಗ್ಗೆ ಮಾನ್ಯ ಮುಂತ್ರಿಗಳು ತಮ್ಮ ಬಾಯಿಂದ ಆಶ್ವಾಸನೆ ಕೊಡುವವರೆಗೂ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಶ್ರೀ ಎನ್. ಜಿ. ನಾಯಕ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಬಂದು ಧರಣಿ ಕುಳಿತರು)

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈ ಬಗ್ಗೆ ನನ್ನ ಹತ್ತಿರ ಅನೇಕಸಾರಿ ಬಂದು ಚರ್ಚೆ ಮಾಡಿದ್ದಾರೆ. ಈ ಒಂದು ಉಪ ನಾಮಗಳು ಏನು ಇವೆ ಇವು ಎಸ್.ಟಿ ಅಥವಾ ನಾಯಂಕ ಎನ್ನುವುದರ ಕೆಳಗೆ ತರಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಆದಷ್ಟು ಬೇಗ ಪರಿಶೀಲನೆ ಮಾಡಿ, ಈ ಹೆಸರುಗಳ ಬಗ್ಗೆ ಶಿಫಾರಸ್ಸನ್ನು ಮಾಡಿ, ಕೇಂದ್ರಸರ್ಕಾರಕ್ಕೆ